

**ಡ್ರಗ್ಸ್ ದಂದೆಯ ಒಂದು ಜಾಲವಷ್ಟೆ ಸಿಕ್ಕಿಬಿದ್ದಿದೆ. ಇಂಥ ಕನಿಷ್ಠ ಹನ್ನೆರಡು ಜಾಲಗಳು ಸಕ್ರಿಯವಾಗಿವೆ. ಅವೆಲ್ಲ ಸ್ಯಾಂಡಲ್‌ವುಡ್‌ನ ಹಲವು ಖ್ಯಾತ ಕಲಾವಿದರು, ನಿರ್ದೇಶಕರು, ತಂತ್ರಜ್ಞ ಗಿರಾಕಿಗಳನ್ನು ಹೊಂದಿವೆ. ಸಿಲಿಕಿರುವ ಈ ಗಿಡವನ್ನು ಹೊಸಕಿದರೆ ಅದರ ಬೇರು ಹೊರಗೆ ಬರಬಹುದಷ್ಟೆ. ಆದರೆ ಇಂಥ ಹಲವು ಹೆಮ್ಮರಗಳು ಹಾಗೆಯೇ ಬೇರೂರಿರುತ್ತವೆ ಎನ್ನುತ್ತಾರೆ ಡ್ರಗ್ಸ್ ದಂಧೆಯ ಸುದ್ದಿ ಜಾಲಾಡಿದ ಪತ್ರಕರ್ತರೊಬ್ಬರು.**

ಮುಖ್ಯವಾಗಿ ಮೂರು ಕಡೆಗಳಿಂದ ಡ್ರಗ್ಸ್ ಸರಬರಾಜಾಗುತ್ತದೆ ಎಂಬುದು ಆ ಲೋಕವನ್ನು ಹತ್ತಿರದಿಂದ ಬಲ್ಲವರ ಮಾತು. ಕೇರಳ, ಮುಂಬೈ ಮತ್ತು ನೈಜೀರಿಯಾಗಳಿಂದ ಬರುವ ಮಾದಕ ಪದಾರ್ಥಗಳು ದೇಶದ ಎಲ್ಲ ಕಡೆಗಳಲ್ಲಿಯೂ ಹರಿದಾಡುತ್ತವೆ.

ಇದು ತುಂಬ ವ್ಯವಸ್ಥಿತವಾದ ದೊಡ್ಡ ಜಾಲ. 'ಡಾರ್ಕ್ ವೆಬ್' ಮೂಲಕವೇ ಈ ವ್ಯವಹಾರ ನಡೆಯುವುದರಿಂದ ಮಟ್ಟಹಾಕುವುದು ಬಲುಕಷ್ಟ. ಡಾರ್ಕ್ ವೆಬ್ ಎನ್ನುವುದು ಕಾನೂನು ಬಾಹಿರವಾದ, ಆದರೆ ಜಗಜ್ಜಾಹೀರಾದ ಒಂದು ಅಂತರ್ಜಾಲ ವ್ಯವಸ್ಥೆ. ಟೆಲಿಗ್ರಾಮ್ ಮೂಲಕ ಹೊಸ ಹೊಸ ಸಿನಿಮಾಗಳನ್ನು ಪೈರಸಿ ಮಾಡಿ ಹಂಚುವ ಜಾಲವಿದೆಯಲ್ಲ, ಟೊರೆಂಟೊ ಮೂಲಕ ವಿಶ್ವದ ಬಹುತೇಕ ಸಿನಿಮಾಗಳನ್ನು ಕದ್ದು ಡೌನ್‌ಲೋಡ್ ಮಾಡಿಕೊಳ್ಳಬಹುದಲ್ಲ... ಇದೂ ಅದೇ ರೀತಿಯ, ಆದರೆ ಇನ್ನಷ್ಟು ಶಕ್ತವೂ ನಿಗೂಢವೂ ಆದ ವ್ಯವಸ್ಥೆ.

### ಕೋಡ್‌ವರ್ಡ್ ಗುರುತು

ಇಲ್ಲಿ ಯಾರೂ ಅವರ ನಿಜನಾಮದಿಂದ ಗುರ್ತಿಸಲ್ಪಡುವುದಿಲ್ಲ. ಬದಲಿಗೆ ಕೋಡ್‌ವರ್ಡ್ ಮೂಲಕವೇ ಗುರ್ತಿಲಾಗುತ್ತದೆ. ಪ್ರತಿಯೊಬ್ಬ ಗಿರಾಕಿಗೂ ಒಂದೊಂದು ಕೋಡ್‌ವರ್ಡ್. ಆ ಕೋಡ್‌ವರ್ಡ್ ಅನ್ನು ನಂತರ ತಮ್ಮ ಜಾಲದ ವಿಸ್ತರಣೆಯಲ್ಲಿಯೂ ಬಳಸಿಕೊಳ್ಳಲಾಗುತ್ತದೆ. ಹಳೆಯ ಸಿನಿಮಾಗಳಲ್ಲಿ ಕೋಡ್‌ಸಂಖ್ಯೆಗಳನ್ನು ಒತ್ತಿ ಖಳನಟನ ಗುಹೆಯ ಬಾಗಿಲು ತೆರೆಯುವ ದೃಶ್ಯಗಳಿರುತ್ತಿದ್ದವಲ್ಲ, ಅದೇ ರೀತಿ ಇಲ್ಲಿ ಕೋಡ್‌ವರ್ಡ್ ಹಾಕಿದರೆ ಮಾದಕ ಪದಾರ್ಥಗಳ ತಿಜೋರಿಯ ಬಾಗಿಲು ತೆರೆದುಕೊಳ್ಳುತ್ತದೆ.

ಇದು ಅಂತರರಾಷ್ಟ್ರೀಯ ಜಾಲವಾದ್ದರಿಂದ ಇಲ್ಲಿ ಯಾವುದೋ ಒಂದು ದೇಶದ ಕರೆನ್ಸಿ ಬಳಕೆಯಾಗುವುದಿಲ್ಲ. ಬಿಟ್ ಕಾಯಿನ್‌ಗಳ ಮೂಲಕ ವ್ಯವಹಾರ ಮಾಡಲಾಗುತ್ತದೆ. ನಮ್ಮ ದೇಶದ ಕರೆನ್ಸಿಯನ್ನು ಅಲ್ಲಿಯೇ ಬಿಟ್ ಕಾಯಿನ್‌ಗಳಿಗೆ ಕನ್ವರ್ಟ್ ಮಾಡಿಕೊಳ್ಳುವ ವ್ಯವಸ್ಥೆಯೂ ಇರುತ್ತದೆ. ಬೇರೆ ಬೇರೆ ದೇಶಗಳಿಂದ, ರಾಜ್ಯಗಳಿಂದ ಮಾದಕ ಪದಾರ್ಥಗಳು ಬರುವಾಗ ಸ್ಥಳೀಯ ಭದ್ರತಾ ವ್ಯವಸ್ಥೆ ಶಾಮೀಲಿಲ್ಲದೇ ದಾಟುವುದು ಕಷ್ಟ. ಹಾಗಾಗಿ ಬಹಳ ಸಲ ಸ್ಥಳೀಯ ಪೊಲೀಸರಿಗೆ ಗೊತ್ತಿದ್ದೇ ಈ ಜಾಲ ಕೆಲಸ ನಿರ್ವಹಿಸುತ್ತಿರುತ್ತದೆ.

ನೇರವಾದ ಒಂದು ನೂಲಿನಂಥ ಸಂಪರ್ಕ ಅಥವಾ ಸರಬರಾಜು ವ್ಯವಸ್ಥೆ ಇಲ್ಲಿ ಇರುವುದಿಲ್ಲ. ಬದಲಿಗೆ ಸರಪಳಿಯ ಹಾಗೆ ಹಲವು ಕೊಂಡಿಗಳು ಸೇರಿ ಒಂದು ಜಾಲ ರೂಪುಗೊಂಡಿರುತ್ತದೆ. ಒಂದು ಕೊಂಡಿ ಇನ್ನೊಂದಕ್ಕೆ ಸೇರಿಕೊಂಡೇ ಜಾಲ ನಿರ್ಮಾಣವಾಗಿದ್ದರೂ ನಡುವೆಲ್ಲಾದರೂ ಒಂದು ಕೊಂಡಿ ಕಳಚಿದರೆ ಇಡೀ ಜಾಲ ನಾಶವಾಗುವುದಿಲ್ಲ; ಬದಲಿಗೆ ಅಲ್ಲಿಯವರೆಗಿನ ಜಾಲವನ್ನು ತುಂಡರಿಸಿಕೊಂಡು ಮತ್ತೊಂದು ದಾರಿಯಲ್ಲಿ ಕಾರ್ಯನಿರ್ವಹಿಸಲು ಶುರುವಾಗುತ್ತದೆ.

ಮಾಲನ್ನು ಆಯಾ ನಗರಕ್ಕೆ ಮುಟ್ಟಿಸುವವರು ಒಬ್ಬರು, ಅವರಿಂದ ತಂದು ಶೇಖರಿಸಿಟ್ಟುಕೊಳ್ಳುವವರು ಇನ್ನೊಬ್ಬರೇ ಆಗಿರುತ್ತಾರೆ. ಎಷ್ಟೋ ಸಲ ಒಬ್ಬರಿಗೊಬ್ಬರು ಪರಿಚಯವೂ ಇರುವುದಿಲ್ಲ. ಹಾಗೆ ಶೇಖರಿಸಿಟ್ಟುಕೊಂಡ ಡ್ರಗ್ಸ್ ಅನ್ನು ಬೇರೆ ಬೇರೆ ರೀತಿಗಳಲ್ಲಿ ತಮ್ಮ ಕಸ್ಟಮರ್‌ಗಳಿಗೆ ತಲುಪಿಸಲಾಗುತ್ತದೆ. ಇನ್ವಿಟೇಷನ್ ಕಾರ್ಡ್, ಸೆಲೆಬ್ರೆಟಿಗಳಿಗೆ ನೀಡುವ ಹೂವಿನ ಬೊಕೆ, ಗಿಫ್ಟ್ ಬಾಕ್ಸ್ ಹೀಗೆ ಹಲವು ರೂಪದಲ್ಲಿ ಸ್ಯಾಂಡಲ್‌ವುಡ್‌ನ ಹಲವು ಮಂದಿಯ ಮನೆಗೆ ಈಗಲೂ ಡ್ರಗ್ಸ್ ನಿರಾತಂಕವಾಗಿ ಸರಬರಾಜಾಗುತ್ತಿದೆ. ಹೀಗೆ ಡ್ರಗ್ಸ್‌ಗಳನ್ನು ಸ್ಥಳೀಯವಾಗಿ ಗಿರಾಕಿಗಳಿಗೆ ತಲುಪಿಸುವವರನ್ನು ಈ ಮಾಫಿಯಾದಲ್ಲಿ ಪೆಡ್ಲರ್‌ಗಳು ಎಂದು ಹೇಳಲಾಗುತ್ತದೆ. ಇತ್ತೀಚೆಗೆ ಬಂಧಿತರಾಗಿರುವ ಅನಿಕಾ ಕೂಡ ಅಂಥ ಪೆಡ್ಲರ್.

ಕೇವಲ ಐದು ಜನ ಗಿರಾಕಿಗಳು ಸಿಕ್ಕರೂ ತಿಂಗಳಿಗೆ ಕನಿಷ್ಠ ಹತ್ತು ಲಕ್ಷ ಆದಾಯ ಅನಾಯಾಸವಾಗಿ ಪೆಡ್ಲರ್‌ಗಳ ಕೈಸೇರುತ್ತದೆ.

ಹೆಣ್ಣುಮಕ್ಕಳನ್ನು ಪೆಡ್ಲರ್ ಆಗಿಸಿಕೊಳ್ಳುವುದಕ್ಕೂ ಒಂದು ಮುಖ್ಯ ಕಾರಣವಿದೆ. ಕಿರುತೆರೆ, ಸಿನಿಮಾ ಲೋಕದ ನಟಿಯರ ಜೊತೆ ಸಂವಾದ ನಡೆಸಲು ಹೆಣ್ಣುಮಕ್ಕಳೇ ಇದ್ದರೆ ಸುಲಭ ಎಂಬುದು ಅದರ ಉದ್ದೇಶ.

### ಒಂದೇ ಜಾಲವೇ?

ಈಗ ಬಂಧನಕ್ಕೆ ಒಳಗಾಗಿರುವ ಅನಿಕಾಳ ವ್ಯವಹಾರ ಗುಟ್ಟುಗಳನ್ನು ಭೇದಿಸಿದರೆ ಸಿನಿಮಾ

